RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ **Volume 148**	ಬೆಂಗಳೂರು, ಗುರುವಾರ, ಅಕ್ಟೋಬರ್ ೨೪, ೨೦೧೩ (ಕಾರ್ತೀಕ ೨, ಶಕ ವರ್ಷ ೧೯೩೫) **Bangalore, Thursday, October 24, 2013 (Karthika 2, Shaka Varsha 1935)**	ಸಂಚಿಕೆ ೪೨ **Issue 42**

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ENERGY SECRETARIAT

Subject : Formation of Technical Committee for suggesting amendments to Solar Policy 2011-16 and Renewable Energy Policy 2009-14.

Read :
1. Karnataka Renewable Energy Policy 2009-14, G.O. No. EN 354 NCE 2008, Dated 19th January 2010.
2. Solar Policy 2011-16 Notification No. EN 61 NCE 2011, Dated 1-7-2011.
3. MD KREDL Letter No. KREDL/07/SRT-PV/2013-14/1837, Dated 06-08-2013.
4. MD BESCOM DO No : BESCOM/MD/GM/DSM/BC-51/3013-14/503, Dated 16-08-2013.

PREAMBLE :

In the Government Order read (1) at above, Renewable Energy Policy 2009-14 have been published to harness Green and Clean Renewable Energy Sources in the State for environmental benefits. Further in the Notification dated 01-07-2011 read (2) at above, Government have published the Solar Policy 2011-16 to promote Solar Power as a part of the Renewable Energy in the State.

The energy demand in the state has been increasing and the thrust on the energy sector is to create adequate generation capacity to meet the demand. Solar Energy is an alternative source of energy that would meet energy demand besides being environmentally benign and Sustainable, as well as to meet the Renewable Purchase Obligation (RPO) this also to help the distribution companies of the State to meet RPO.

In order to encourage the grid connected Solar Roof top Generation on Residential/Commercial building, Industrial consumers, Government buildings, Government (State/Central) assisted Rooftop programs, Govt. bodies a clear cut policy is felt necessary in order to ensure the compatibility of the Solar Roof Top Photo Voltaic (RTPV) installations with Distribution Grid. It is also to ensure the safety of the Solar Roof Top Photo Voltaic (RTPV) operating in parallel with Distribution Grid and safety of company's employees, agents, consumers and the general public. It is also to encourage and enable Small solar renewable energy generators.

It the read (3) above Managing Director, KREDL has proposed for formulation of policy for Solar Roof Top and PV generation. At read (4) above MD BESCOM has formulated a draft guidelines regarding Solar Roof Top Photo Voltaic implementation procedure. In this regard, a Technical Committee for suggesting amendments to Solar Policy 2011-16 and Renewable Energy Policy 2009-14 is to be formed under the chairmanship of Managing Director, KREDL with Expertise from Renewable Energy sector.

After detailed examination of the proposal, the following order is issued.

GOVERNMENT ORDER NO. EN 61 NCE 2011, BANGALORE, DATED 05TH SEPTEMBER 2013

Under the Circumstances explained above, Government are pleased to constitute a Technical Committee for suggesting amendments to Solar Policy 2011-16 and Renewable Energy Policy 2009-14 consisting the following with immediate effect and until further orders.

1	Managing Director, Karnataka Renewable Energy Development Limited, Bangalore	Chairman
2	General Manager, Karnataka Renewable Energy Development Limited, Bangalore	Convener
3	Chief Engineer P & C, Karnataka Power Transmission Corporation Limited (KPTCL)	Member
4	Dr. Nagannagowda, Karnataka Power Transmission Corporation Limited (KPTCL)	Member
5	Executive Engineer (2), EMC, Energy Department	Member
6	Sri Manjunath B.R., Deputy Director, Karnataka Electricity Regulatory Commission (KERC)	Invitee
7	Executive Director, Center for Study of Science, Technology and Policy (C-step), Bangalore	Member
8	Sri Praveen Kulkarni, K.K. Nesar projects private limited	Member
9	Sri B.V. Naidu, M/s. Sagitaur Ventures India Pvt. Ltd.	Member
10	Sri N. Ranganath, M/s EI Technologies Private limited	Member
11	President, Solar Manufacturing Industries Association, Karnataka	Member
12	President, Renewable Energy Developers Association, Karnataka	Member

The said committee Shall :

Study the existing Renewable Energy Policy 2009-14 and Solar policy 2011-16 and bring out the amendments required if any including the following :

a) The capacity addition under Renewable Energy Certificate Mechanism (RECM)

b) Solar Roof Top Photo Voltaic (RTPV) grid connection.

c) Incorporation of Best Practices and innovation.

The committee shall submit the report within one month from the date of the order.

By Order and in the name of the Governor of Karnataka,
A.A. CHAPPARBAND,
Under Secretary to Government,
Energy Department.

PR. 910
SC. 30

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವಾಲಯ

ವಿಷಯ: ಸಾಮಾಜಿಕವಾಗಿ ಮುಂದುವರೆದ ವ್ಯಕ್ತಿಗಳು/ವರ್ಗಗಳನ್ನು (ಕೆನೆಪದರ) ಹಿಂದುಳಿದ ವರ್ಗಗಳ ಮೀಸಲಾತಿಯಿಂದ ಹೊರತು ಪಡಿಸಲು ಕೆನೆಪದರ ನೀತಿಯ ವಾರ್ಷಿಕ ಆದಾಯ ಮಿತಿಯನ್ನು ರೂ.3.50 ಲಕ್ಷಗಳಿಂದ ರೂ.4.50 ಲಕ್ಷಗಳಿಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002
2. ಸರ್ಕಾರದ ಆದೇಶ ಸಂಖ್ಯೆ: ಸಕಇ 104 ಬಿಸಿಎ 2011, ದಿನಾಂಕ: 06.02.2012.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕಕಡತ ಪ್ರಸ್ತಾವನೆ ಸಂಖ್ಯೆ:ಹಿಂವಕಇ/ಮಾಶಾ:ಸಿಆರ್–7/2013–14, ದಿನಾಂಕ: 22–07–2013.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದ ಅನುಬಂಧ–II ರ ಅಂಶ–3 ರಲ್ಲಿ ಕೆನೆಪದರವನ್ನು ನಿರ್ಣಯಿಸಲು ಹಿಂದುಳಿದ ವರ್ಗಗಳ ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಅನ್ವಯಿಸುವಂತೆ ವಾರ್ಷಿಕ ಆದಾಯ ಮಿತಿಯನ್ನು ರೂ.2.00 ಲಕ್ಷಗಳಿಗೆ ನಿಗದಿಗೊಳಿಸಲಾಗಿದೆ. ತದನಂತರ

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಒಟ್ಟು ವಾರ್ಷಿಕ ಆದಾಯ ಮಿತಿಯನ್ನು (Gross Income) ಮಿತಿಯನ್ನು ರೂ.2.00 ಲಕ್ಷಗಳಿಂದ ರೂ.3.50 ಲಕ್ಷಗಳಿಗೆ ಹೆಚ್ಚಿಸಿ ನಿಗದಿಗೊಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಏಕಕಡತ ಮುಖೇನ ಪ್ರಸ್ತಾವನೆಯನ್ನು ಸಲ್ಲಿಸಿ ಸಾಮಾಜಿಕವಾಗಿ ಮುಂದುವರೆದ ವ್ಯಕ್ತಿಗಳು/ವರ್ಗಗಳನ್ನು ಕೆನೆಪದರ ಹಿಂದುಳಿದ ವರ್ಗಗಳ ಮೀಸಲಾತಿಯಿಂದ ಹೊರತುಪಡಿಸಲು ಕೆನೆಪದರ ನೀತಿಯ ವಾರ್ಷಿಕ ಆದಾಯ ಮಿತಿಯನ್ನು ರೂ.3.50 ಲಕ್ಷಗಳಿಂದ ರೂ.4.50 ಲಕ್ಷಗಳಿಗೆ ಹೆಚ್ಚಿಸಲು ಪ್ರಸ್ತಾವಿಸಿರುತ್ತಾರೆ.

ಮುಂದುವರೆದು ಇತ್ತೀಚಿನ ವರ್ಷಗಳಲ್ಲಿ ಆಗಿರುವ ಹಣದುಬ್ಬರನ್ನು ಗಮನದಲ್ಲಿರಿಸಿಕೊಂಡು ಹಿಂದುಳಿದ ವರ್ಗಗಳ ಬಡವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವಿಶೇಷ ವರದಿ ಸಂಖ್ಯೆ: 01/2009 ನ್ನು ಸರ್ಕಾರಕ್ಕೆ ಸಲ್ಲಿಸಿ ಪ್ರಸ್ತುತ ಚಾಲ್ತಿಯಲ್ಲಿರುವ ಕೆನೆಪದರ ಆರ್ಥಿಕ ನೀತಿಯನ್ನು ಕೇಂದ್ರ ಸರ್ಕಾರ ಪರಿಷ್ಕರಿಸಿದ ಹಿನ್ನೆಲೆಯಲ್ಲಿ ರಾಜ್ಯದಲ್ಲಿಯೂ ಸಹ ಹೆಚ್ಚಿಸುವ ಬಗ್ಗೆ ಆಯೋಗವು ತನ್ನ 147ನೇ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ ಕೇಂದ್ರ ಸರ್ಕಾರವು ಹಿಂದುಳಿದ ವರ್ಗಗಳ ಮೀಸಲಾತಿ ಸಂಬಂಧ ಇರುವ ಆದಾಯ ಮಿತಿಯನ್ನು ಈಗಾಗಲೇ ಪರಿಷ್ಕರಿಸಿರುವಂತೆ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ–2ಎ, 2ಬಿ, 3ಎ & 3ಬಿ ಗಳಿಗೆ ಅನ್ವಯವಾಗುವಂತೆ ರಾಜ್ಯದ ಕೆನೆಪದರ ಆದಾಯದ ಮಿತಿಯನ್ನು ರೂ.4.50 ಲಕ್ಷಗಳಿಗೆ ನಿಗಧಿಪಡಿಸಿ ಆದೇಶ ಹೊರಡಿಸುವಂತೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸರ್ವಾನುಮತದಿಂದ ನಿರ್ಣಯಿಸಿ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಕೆನೆಪದರ ನೀತಿಯ ವಾರ್ಷಿಕ ಆದಾಯ ಮಿತಿಯನ್ನು ರೂ.3.50 ಲಕ್ಷಗಳಿಂದ ರೂ.4.50 ಲಕ್ಷಗಳಿಗೆ ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಹಿಂವಕ 192 ಬಿಸಿಎ 2013, ಬೆಂಗಳೂರು, ದಿನಾಂಕ: 04.09.2013

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002ರ ಅನುಬಂಧ–IIರ ಅಂಶ–3 ರಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಅನ್ವಯಿಸುವಂತೆ ಕೆನೆಪದರಕ್ಕೆ ನಿಗಧಿಪಡಿಸಿರುವ ಅಭ್ಯರ್ಥಿಯ ಮತ್ತು ಅವರ ತಂದೆ–ತಾಯಿ/ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು (Gross Income) ರೂ.3.50 ಲಕ್ಷಗಳಿಂದ ರೂ.4.50 ಲಕ್ಷಗಳಿಗೆ ಈ ತಕ್ಷಣವೇ ಜಾರಿಗೆ ಬರುವಂತೆ ಹೆಚ್ಚಿಸಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000, ದಿನಾಂಕ: 30.03.2002 ರಲ್ಲಿರುವ ಇತರೇ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 585 ವೆಚ್ಚ–3/13 ದಿನಾಂಕ: 03.09.2009 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ,
ಸರ್ಕಾರದ ಉಪ ಕಾರ್ಯದರ್ಶಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

PR. 929
SC. 1000

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮತ್ತು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗಳಿಗೆ ನೀಡಿರುವ ಸಾಲಗಳ ಮರುಪಾವತಿಗೆ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:
4. ದಿನಾಂಕ 26–04–2002 ರ ಸಿಎಂಡಬ್ಲ್ಯೂ 253 ಸಸಕಾ 2001ರ ಸರ್ಕಾರದ ಆದೇಶ.
5. ದಿನಾಂಕ 06–12–2000 ರ ಸಿಎಂಡಬ್ಲ್ಯೂ 248 ಸಿಓಎಫ್ 2000ರ ಸರ್ಕಾರದ ಆದೇಶ.
6. ದಿನಾಂಕ 20–04–2002 ರ ಸಿಎಂಡಬ್ಲ್ಯೂ 241 ಸಿಓಎಫ್ 2001ರ ಸರ್ಕಾರದ ಆದೇಶ.
7. ದಿನಾಂಕ 24–03–2011ರ ವಾಕೈ 94 ಸಸಕಾ 2008ರ ಸರ್ಕಾರದ ಆದೇಶ.

ಪ್ರಸ್ತಾವನೆ:

ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಪಾಂಡವಪುರ, ಮಂಡ್ಯ ಜಿಲ್ಲೆ, ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ಮತ್ತು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಸಂಗೂರು, ಹಾವೇರಿ ಜಿಲ್ಲೆ, ಈ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ದುಡಿಯುವ ಬಂಡವಾಳಕ್ಕಾಗಿ ಸಮೂಹ ಬ್ಯಾಂಕ್‌ಗಳಾದ ಡಿ.ಸಿ.ಸಿ. ಬ್ಯಾಂಕ್, ಚಿತ್ರದುರ್ಗ ಮತ್ತು ತುಮಕೂರು ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗಳಿಂದ ಪಡೆಯಲು ಸರ್ಕಾರದ ಖಾತರಿಯನ್ನು ಅನುಕ್ರಮವಾಗಿ ಮೇಲೆ ಓದಲಾದ (1) ರಿಂದ (3) ರವರೆಗಿನ ಆದೇಶಗಳ ಮೂಲಕ ನೀಡಲಾಗಿತ್ತು.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ರವರು ದಿನಾಂಕ 11–10–2008 ರಂದು ಆರ್ಥಿಕ ಇಲಾಖೆಗೆ ಪತ್ರ ಬರೆದು ಸದರಿ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸಕಾಲದಲ್ಲಿ ಹಣವನ್ನು ಪಾವತಿಸದೇ ಇರುವುದರಿಂದ ಬ್ಯಾಂಕ್ ಸರ್ಕಾರದ ಖಾತರಿಯನ್ನು ತೆರವುಗೊಳಿಸಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ

ಕೈಗೊಂಡ ನಿರ್ಣಯಗಳನ್ವಯ 2010–11ನೇ ಸಾಲಿನ ಪೂರಕ ಅಂದಾಜು–III ರಲ್ಲಿ ನೀಡಿರುವ ಅನುದಾನದನ್ವಯ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತವು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಪಾವತಿಸಲು ಬಾಕಿ ಇರುವ ₹634.36 ಲಕ್ಷಗಳನ್ನು, ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತವು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಪಾವತಿಸಲು ಬಾಕಿ ಇರುವ ₹621.48 ಲಕ್ಷಗಳನ್ನು ಮತ್ತು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತವು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಪಾವತಿಸಲು ಬಾಕಿ ಇರುವ ₹1227.60 ಲಕ್ಷಗಳನ್ನು ಅಪೆಕ್ಸ್ ಬ್ಯಾಂಕಿಗೆ ಪಾವತಿಸಲು ಮೇಲೆ ಓದಲಾದ (4) ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಈ ಸಹಕಾರಿ ಸಕ್ಕರೆ ಕಾರ್ಖಾನೆಗಳು ಪಾವತಿಸಲು ಬಾಕಿಯಿರುವ ಮೊತ್ತವನ್ನು ಸರ್ಕಾರವು ಅಪೆಕ್ಸ್ ಬ್ಯಾಂಕಿಗೆ ದಿನಾಂಕ 24–03–2011ರ ಆದೇಶದ ಪ್ರಕಾರ ಪಾವತಿಸಬೇಕಾಗಿರುವುದರಿಂದ ಸಾಲದ ಮರುಪಾವತಿಗೆ ಷರತ್ತು ಮತ್ತು ನಿಬಂಧನೆಗಳನ್ನು ಅನುಕ್ರಮವಾಗಿ ಈ ಆದೇಶದ ಅನುಬಂಧ (i), ಅನುಬಂಧ (ii) ಮತ್ತು ಅನುಬಂಧ (iii) ರ ಪ್ರಕಾರ ವಿಧಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 42 ಸಸಕಾ 2011, ಬೆಂಗಳೂರು, ದಿನಾಂಕ : 27–07–2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಪಾಂಡವಪುರ, ಮಂಡ್ಯ ಜಿಲ್ಲೆ, ಈ ಕಾರ್ಖಾನೆಯು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ ಪಾವತಿಸಲು ಬಾಕಿ ಇರುವ ₹634.36 ಲಕ್ಷಗಳನ್ನು (ರೂಪಾಯಿ ಆರುನೂರ ಮೂವತ್ತನಾಲ್ಕು ಲಕ್ಷಗಳ ಮೂವತ್ತಾರು ಸಾವಿರಗಳು ಮಾತ್ರ), ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ಈ ಕಾರ್ಖಾನೆಯು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಪಾವತಿಸಲು ಬಾಕಿಯಿರುವ ₹621.48 ಲಕ್ಷಗಳನ್ನು, (ರೂಪಾಯಿ ಆರುನೂರ ಇಪ್ಪತ್ತೊಂದು ಲಕ್ಷಗಳ ನಲವತ್ತೆಂಟು ಸಾವಿರಗಳು ಮಾತ್ರ) ಹಾಗೂ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಸಂಗೂರು, ಹಾವೇರಿ ಜಿಲ್ಲೆ, ಈ ಕಾರ್ಖಾನೆಯು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ ಪಾವತಿಸಲು ಬಾಕಿ ಇರುವ ₹1227.60 ಲಕ್ಷಗಳನ್ನು, (ರೂಪಾಯಿ ಒಂದು ಸಾವಿರದ ಎರಡು ನೂರ ಇಪ್ಪತ್ತೇಳು ಲಕ್ಷಗಳ ಅರವತ್ತು ಸಾವಿರಗಳು ಮಾತ್ರ) ಸರ್ಕಾರವು ಪಾವತಿಸಿರುವುದರಿಂದ ಈ ಸಾಲವನ್ನು ಮರುಪಾವತಿ ಮಾಡುವ ಸಲುವಾಗಿ ಷರತ್ತು ಮತ್ತು ನಿಬಂಧನೆಗಳನ್ನು ಅನುಕ್ರಮವಾಗಿ ಈ ಆದೇಶದ ಅನುಬಂಧ (i), ಅನುಬಂಧ (ii) ಮತ್ತು ಅನುಬಂಧ (iii) ರ ಪ್ರಕಾರ ವಿಧಿಸಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ದಿನಾಂಕ 19–05–2011ರ ಅನಧಿಕೃತ ಟಿಪ್ಪಣಿ ಸಂಖ್ಯೆ ವಾಕೈ 71 ಆಂಆಸ (1) 2011ರ ಮೂಲಕ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 121 ಆರ್‌ಎಲ್‌ಜಿ 2012 ದಿನಾಂಕ 8–10–2012 ಮತ್ತು ಎಫ್‌ಡಿ 272 ವೆಚ್ಚ–2/2012, ದಿನಾಂಕ 11–10–2012ರ ಮೂಲಕ ನೀಡಿರುವ ಸಹಮತದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುಜಾತ ಆರ್. ಪ್ರಸಾದ್,
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ. (ಸಹಕಾರಿ ಸಕ್ಕರೆ)

ANNEXURE-I

Annexure to the G.O. No. CI 42 SaSaKa 2011, dated 27-07-2013

Essential details of Loans sanctioned vide Government Orders

No. CI 94 SSK 2008 dated 24-03-2011

LOANS AND ADVANCES BY STATE GOVERNMENT

1	Sanctioning Authority.	Government of Karnataka.	
2	Sanction (G.O. No. and date).	No. CI 94 SSK 2008, dated 24-03-2011.	
3	To whom sanctioned.	Pandavapura Sahakari Sakkare Karkhane Niyamitha, Pandavapura, Mandya District.	
4	Amount sanctioned (in words and figures)	₹634.36 (Rupees six hundred thirty four lakhs and thirty six thousands only).	
5	Sanction valid upto.	Not applicable.	
6	Purpose of the Loan.	Settlement of overdues to Apex Bank.	
7	Payable in cash or adjustment.	Cash/cheque.	
8	Plan or Non-plan.	Plan. ……………	
9	Head of Account to which the loan is debitable.	6860-04-101-0-10.	
10	Progressive amount of loan sanctioned to date in the financial year.	G.O. No. and date	Amount (₹in lakhs)
		No. CI 94 SSK 2008 dated 24-03-2011	634.36
		Total	634.36

11	Period of Loan.	10 years.
12	Moratorium towards repayment, if any.	-Nil –
13	Date and year from which repayment is to commence.	1-4-2011.
14	Mode of repayment.	By cheque or DD.
15	Rate of Interest a) Effective (if installment received on or before due date) b) Normal rate (if installment not received on or before due date) c) Penal rate of interest (on over due installment for the period of default) d) Mode of recovery of interest	13% 2.5%
16	Adjustment of over due loans, if any.	G.O. No. CI 94 SSK 2008, dated 24-3-2011.
17	Authority who countersigns the payee's receipt.	Commissioner for Cane Development and Director of Sugar, Bangalore.
18	Authority who maintains loan ledger and watches recovery.	Commissioner for Cane Development and Director of Sugar, Bangalore.
19	Authority responsible for reconciliation and monitoring of loan	Commissioner for Cane Development and Director of Sugar, Bangalore.
20	Authority to whom utilisation certificates are to be given.	Commissioner for Cane Development and Director of Sugar, Bangalore.
21	Authority who should furnish estimate of recovery of loan and interest for inclusion in the budget estimates.	Commissioner for Cane Development and Director of Sugar, Bangalore.

SUJATHA R. PRASAD,
Under Secretary to Government I/c,
Commerce and Industries Department
(Co-operative Sugar)

ANNEXURE-II

Annexure to the G.O. No. CI 42 SaSaKa 2011, dated 27-07-2013

Essential details of Loans sanctioned vide Government Orders

No. CI 94 SSK 2008 dated 24-03-2011

LOANS AND ADVANCES BY STATE GOVERNMENT

1	Sanctioning Authority.	Government of Karnataka.
2	Sanction (G.O. No. and date).	No. CI 94 SSK 2008, dated 24-03-2011.
3	To whom sanctioned	Vanivilasa Sahakari Sakkare Karkhane Niyamitha, Hiriyur, Chitradurga District.
4	Amount sanctioned. (in words and figures)	₹621.48 (Rupees six hundred twenty one lakhs and forty eight thousands only)
5	Sanction valid upto.	Not applicable.
6	Purpose of the Loan.	Settlement of overdues to Apex Bank.
7	Payable in cash or adjustment.	Cash/cheque.
8	Plan or Non-plan.	Plan. ……………

9	Head of Account to which the loan is debitable.	6860-04-101-0-03
10	Progressive amount of loan sanctioned to date in the financial year.	G.O. No. and date: No. CI 94 SSK 2008 dated 24-03-2011 — Amount (₹in lakhs): 621.48 Total: 621.48
11	Period of Loan.	10 years.
12	Moratorium towards repayment, if any.	-Nil –
13	Date and year from which repayment is to commence.	1-4-2011.
14	Mode of repayment.	By cheque or DD.
15	Rate of Interest, a) Effective (if installment received on or before due date) b) Normal rate (if installment not received on or before due date) c) Penal rate of interest (on over due installment for the period of default) d) Mode of recovery of interest,	13% 2.5%
16	Adjustment of over due loans, if any,	G.O. No. CI 94 SSK 2008, dated 24-3-2011.
17	Authority who countersigns the payee's receipt.	Commissioner for Cane Development and Director of Sugar, Bangalore.
18	Authority who maintains loan ledger and watches recovery.	Commissioner for Cane Development and Director of Sugar, Bangalore.
19	Authority responsible for reconciliation and monitoring of loan.	Commissioner for Cane Development and Director of Sugar, Bangalore.
20	Authority to whom utilisation certificates are to be given.	Commissioner for Cane Development and Director of Sugar, Bangalore.
21	Authority who should furnish estimate of recovery of loan and interest for inclusion in the budget estimates.	Commissioner for Cane Development and Director of Sugar, Bangalore.

SUJATHA R. PRASAD,
Under Secretary to Government I/c,
Commerce & Industries Department
(Co-operative Sugar)

ANNEXURE-III

Annexure to the G.O. No. CI 42 SaSaKa 2011, dated 27-07-2013

Essential details of Loans sanctioned vide Government Orders

No. CI 94 SSK 2008 dated 24-03-2011

LOANS AND ADVANCES BY STATE GOVERNMENT

1	Sanctioning Authority.	Government of Karnataka.
2	Sanction (G.O. No. and date)	No. CI 94 SSK 2008, dated 24-03-2011.
3	To whom sanctioned.	Karnataka Sahakari Sakkare Karkhane Niyamitha, Sangur, Haveri District.

4	Amount sanctioned (in words and figures),	₹1227.60 (Rupees One thousand and two hundred twenty seven lakhs and sixty thousands only)
5	Sanction valid upto,	Not applicable.
6	Purpose of the Loan.	Settlement of overdues to Apex Bank.
7	Payable in cash or adjustment.	Cash/cheque,
8	Plan or Non-plan.	Plan. ……………
9	Head of Account to which the loan is debitable.	6425-00-108-5-07
10	Progressive amount of loan sanctioned to date in the financial year.	G.O. No. and date — Amount (₹in lakhs) No. CI 94 SSK 2008 dated 24-03-2011 — 1227.60 Total — 1227.60
11	Period of Loan.	10 years.
12	Moratorium towards repayment, if any,	-Nil –
13	Date and year from which repayment is to commence.	1-4-2011
14	Mode of repayment.	By cheque or DD.
15	Rate of Interest, a) Effective (if installment received on or before due date) b) Normal rate (if installment not received on or before due date) c) Penal rate of interest (on over due installment for the period of default) d) Mode of recovery of interest.	13% 2.5%
16	Adjustment of over due loans, if any,	G.O. No. CI 94 SSK 2008, dated 24-3-2011.
17	Authority who countersigns the payee's receipt.	Commissioner for Cane Development and Director of Sugar, Bangalore.
18	Authority who maintains loan ledger and watches recovery.	Commissioner for Cane Development and Director of Sugar, Bangalore.
19	Authority responsible for reconciliation and monitoring of loan.	Commissioner for Cane Development and Director of Sugar, Bangalore.
20	Authority to whom utilisation certificates are to be given	Commissioner for Cane Development and Director of Sugar, Bangalore.
21	Authority who should furnish estimate of recovery of loan and interest for inclusion in the budget estimates.	Commissioner for Cane Development and Director of Sugar, Bangalore.

SUJATHA R. PRASAD,
Under Secretary to Government I/c,
Commerce & Industries Department
(Co-operative Sugar)

PR. 904

ಶಿಕ್ಷಣ ಸಚಿವಾಲಯ

ವಿಷಯ: ಮಲ್ಲೇಶ್ವರಂ ಬಾಂಬ್ ಸ್ಫೋಟದಲ್ಲಿ ಸಿಲುಕಿದ ಕು: ರಕ್ಷಿತಾ ಸುಜಯ್ ಇವರಿಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಸೀಟನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1. ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಪತ್ರ ದಿನಾಂಕ : 22–04–2013.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಟಿಪ್ಪಣಿ ದಿನಾಂಕ : 26–04–2013.
3. ಕು: ರಕ್ಷಿತಾ ಸುಜಯ್, ಬೆಂಗಳೂರುರವರ ಮನವಿ.
4. ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಟಿಪ್ಪಣಿ ಸಂಖ್ಯೆ : ಉಶಿಪ್ರಸ/55/2013, ದಿನಾಂಕ : 12–06–2013.
5. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಡತ ಸಂಖ್ಯೆ : ಇಡಿ/ಕೆಇಎ/ಲೀಗಲ್/ಸಿಆರ್–11/13–14, ದಿನಾಂಕ : 13–06–2013.

ಪ್ರಸ್ತಾವನೆ:

ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪತ್ರದಲ್ಲಿ ದಿನಾಂಕ : 17–04–2013ರಂದು ಮಲ್ಲೇಶ್ವರಂನಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಕು: ರಕ್ಷಿತಾ ಮತ್ತು ಕು: ಲಿಶಾ ಇವರುಗಳು ತೀವ್ರ ಸ್ವರೂಪದಲ್ಲಿ ಗಾಯಗೊಂಡಿದ್ದರಿಂದ ಸದರಿಯವರುಗಳಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಪ್ರತ್ಯೇಕವಾಗಿ ಸಿ.ಇ.ಟಿ. ಪರೀಕ್ಷೆ ನಡೆಸಲು ಸೂಕ್ತ ಕ್ರಮವಹಿಸುವಂತೆ ಕೋರಿರುತ್ತಾರೆ. ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಅಂದಿನ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸದರಿಯವರಿಗೆ ಸಿಇಟಿಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವಂತೆ ಪಿ.ಯು. ಮಂಡಳಿಯ ನಿರ್ದೇಶಕರಿಗೆ ಕೋರಿರುತ್ತಾರೆ. ಅದರಂತೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸದರಿಯವರುಗಳು ಚಿಕಿತ್ಸೆ ಪಡೆಯುತ್ತಿದ್ದ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿ ಸಿ.ಇ.ಟಿ. ಪರೀಕ್ಷೆಯನ್ನು ನಡೆಸಿರುತ್ತಾರೆ.

ಕು: ರಕ್ಷಿತಾ ಸುಜಯ್ ರವರು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಮನವಿಯನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಸಲ್ಲಿಸಿ ಮಲ್ಲೇಶ್ವರಂನಲ್ಲಿ ನಡೆದ ಬಾಂಬ್ ಸ್ಫೋಟದಿಂದಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತಮವಾದ ಅಂಕಗಳನ್ನು ಪಡೆಯಲು ಸೂಕ್ತ ರೀತಿಯಲ್ಲಿ ತಯಾರಿ ನಡೆಸಲು ಸಾಧ್ಯವಾಗದಿದ್ದ ಕಾರಣ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಸೀಟನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಹಂಚಿಕೆ ಮಾಡುವಂತೆ ಕೋರಿರುತ್ತಾರೆ.

ಮಾನ್ಯ ಉನ್ನತ ಶಿಕ್ಷಣ ಸಚಿವರು ಮೇಲೆ ಕ್ರಮ ಸಂಖ್ಯೆ (4)ರ ಟಿಪ್ಪಣಿಯಲ್ಲಿ ಕು: ರಕ್ಷಿತಾ ಸುಜಯ್ ರವರ ಮನವಿಯನ್ನು ಅನುಕಂಪದಿಂದ ಪರಿಗಣಿಸಿ ಸರ್ಕಾರಿ ಕೋಟಾದಡಿ ಇಂಜಿನಿಯರಿಂಗ್ ಕೋರ್ಸಿಗೆ ಪ್ರವೇಶಾತಿಯನ್ನು ನೀಡಲು ಸೂಕ್ತ ಕ್ರಮವಹಿಸುವಂತೆ ಆದೇಶಿಸಿರುತ್ತಾರೆ.

ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವರು ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಕಡತದಲ್ಲಿ ಕು: ರಕ್ಷಿತಾ ಸುಜಯ್ ರವರು ಸಿಇಟಿ 2013ರಲ್ಲಿ ಭಾಗವಹಿಸಿದ್ದು, ಇಂಜಿನಿಯರಿಂಗ್ ವಿಷಯದಲ್ಲಿ 62.295 ರ್‍ಯಾಂಕನ್ನು ಪಡೆದಿರುತ್ತಾರೆಂದು, ಇವರಿಗೆ ಯಾವುದಾದರೂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಒಂದು ಇಂಜಿನಿಯರಿಂಗ್ ಸೀಟನ್ನು ನೀಡಲು ಕ್ರಮವಹಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಕರ್ನಾಟಕ ವೃತ್ತಿಪರ ಕೋರ್ಸುಗಳ ಪ್ರವೇಶಾತಿ ನಿಯಮಗಳು 2006ರನ್ವಯ ವೃತ್ತಿಪರ ಶಿಕ್ಷಣ ಕೋರ್ಸುಗಳಿಗೆ ಪ್ರವೇಶಾತಿಗಳನ್ನು ಮಾಡಲಾಗುತ್ತಿದ್ದು. ಸದರಿ ನಿಯಮಗಳನ್ವಯ ಕು: ರಕ್ಷಿತಾ ಸುಜಯ್ ರವರ ಕೋರಿಕೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಆದರೆ ಮೇಲೆ ತಿಳಿಸಿದ ಅಂಶಗಳ ಹಿನ್ನೆಲೆಯಲ್ಲಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಬೆಂಗಳೂರಿನ ಎಸ್.ಕೆ.ಎಸ್.ಜೆ.ಟಿ. ಸಂಸ್ಥೆಯಲ್ಲಿನ ಪ್ರಥಮ ಬಿ.ಇ. (ಕಂಪ್ಯೂಟರ್ ಸೈನ್ಸ್ ವಿಭಾಗ) ಕೋರ್ಸಿನಲ್ಲಿ ಲಭ್ಯವಿರುವ 60 ಪ್ರವೇಶ ಮಿತಿಯಲ್ಲಿ ಒಂದು ಸೀಟನ್ನು ಇವರಿಗೆ ಕಾಯ್ದಿರಿಸಲು ಕ್ರಮ ವಹಿಸಲು ತೀರ್ಮಾನಿಸಿದೆ.

ಈ ಪ್ರಸ್ತಾವನೆಯು ಸರ್ಕಾರದ ನೀತಿ ನಿರ್ಣಯಕ್ಕೆ ಸಂಬಂಧಿಸಿರುವುದರಿಂದ ಇದಕ್ಕೆ ಸಚಿವ ಸಂಪುಟದ ಅನುಮೋದನೆ ಕೋರಲಾಗಿತ್ತು. ಅದರಂತೆ ಕು: ರಕ್ಷಿತಾ ಸುಜಯ್‌ರವರಿಗೆ ಸರ್ಕಾರಿ ಕೋಟಾದಡಿ ಒಂದು ಇಂಜಿನಿಯರಿಂಗ್ ಸೀಟನ್ನು ಅವರ ಶೈಕ್ಷಣಿಕ ಅರ್ಹತೆಗೊಳಪಟ್ಟು ವಿಶೇಷ ಪ್ರಕರಣವೆಂದು ಪರಿಗಣಿಸಿ ಹಂಚಿಕೆ ಮಾಡಲು ಸಚಿವ ಸಂಪುಟವು ನಿರ್ಣಯಿಸಿತು. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 96 ಟಿಇಸಿ 2013, ಬೆಂಗಳೂರು, ದಿನಾಂಕ: 06ನೇ ಜುಲೈ, 2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ : 17–04–2013ರಂದು ಮಲ್ಲೇಶ್ವರಂನಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ತೀವ್ರವಾಗಿ ಗಾಯಗೊಂಡ ಕು: ರಕ್ಷಿತಾ ಸುಜಯ್ ಇವರಿಗೆ 2013–14ನೇ ಸಾಲಿಗೆ ಪ್ರಥಮ ವರ್ಷದ ಬಿ.ಇ. ಕೋರ್ಸಿಗೆ ಬೆಂಗಳೂರಿನ ಸರ್ಕಾರಿ ಎಸ್.ಕೆ.ಎಸ್.ಜೆ.ಟಿ. ಸಂಸ್ಥೆಯಲ್ಲಿನ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಲಭ್ಯವಿರುವ 60 ಪ್ರವೇಶ ಮಿತಿಯಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರಿ ಕೋಟಾದಡಿ ಒಂದು ಸೀಟನ್ನು ಅವರ ಶೈಕ್ಷಣಿಕ ಅರ್ಹತೆಗೊಳಪಟ್ಟು ಹಂಚಿಕೆ ಮಾಡಲು ಅನುಮೋದನೆ ನೀಡಿದೆ.

ಕು: ರಕ್ಷಿತಾ ಸುಜಯ್ ಇವರು ದಿನಾಂಕ : 20–07–2013ರೊಳಗೆ ಪ್ರಾಂಶುಪಾಲರು, ಸರ್ಕಾರಿ ಎಸ್.ಕೆ.ಎಸ್.ಜೆ.ಟಿ. ಸಂಸ್ಥೆ, ಬೆಂಗಳೂರು ಇವರ ಸಮ್ಮುಖದಲ್ಲಿ ನಿಗದಿತ ಶುಲ್ಕ ಪಾವತಿಸಿ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ನಿಗದಿತ ಅವಧಿಯೊಳಗೆ ಪ್ರವೇಶಾತಿ ಮಾಡಿಕೊಳ್ಳದಿದ್ದಲ್ಲಿ ಅವರಿಗೆ ಹಂಚಿಕೆ ಮಾಡಿರುವ ಸೀಟು ತಂತಾನೇ ರದ್ದಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಮನೋರಮಾ ಡಿ.ಸಿ.
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

PR 908
SC 25

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು–59